ಜೈನಾಚಾರ್ಯ ಶುಭಚಂದ್ರರು ತಮ್ಮ 'ಜ್ಞಾನಾರ್ಣವ'ದಲ್ಲಿ ಹೀಗೆ ಹೇಳುತ್ತಾರೆ:

**ನಿಃಸಂಗಃ ಸಂವೃತಸ್ವಾಂತಃ ಕೂರ್ಮವತ್ಸಂವೃತೇಂದ್ರಿಯಃ ।**
**ಯಮೀ ಸಮತ್ವಮಾಪನ್ನೋ ಧ್ಯಾನತಂತ್ರೇ ಸ್ಥಿರೀಭವೇತ್ ॥**

(ಜ್ಞಾನಾರ್ಣವ, ಅಧ್ಯಾಯ ೩೦, ಶ್ಲೋಕ ೨)

"ಯಾವ ಮುನಿವರ್ಯರ ಮನಸ್ಸು ನಿಸ್ಸಂಗ ಮತ್ತು ಸಂವರರೂಪಿಯಾಗಿದೆಯೋ ಮತ್ತು ಆಮೆಯು ತನ್ನ ಶರೀರದ ಅಂಗಾಂಗಗಳನ್ನು ಸೆಳೆದುಕೊಳ್ಳುವಂತೆ ಇಂದ್ರಿಯಗಳು ಸಂಕುಚಿಸಲ್ಪಟ್ಟಿವೆಯೋ, ಅಂತಹ ಮುನಿಯು ರಾಗದ್ವೇಷರಹಿತ ಸಮಭಾವವನ್ನು ಹೊಂದಿ ಧ್ಯಾನತಂತ್ರದಲ್ಲಿ ಸ್ಥಿರಭಾವವನ್ನು ಹೊಂದುತ್ತಾನೆ."

ಇದನ್ನೇ ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ:

**ಯದಾ ಸಂಹರತೇ ಚಾಯಂ ಕೂರ್ಮೋಽಙ್ಗಾನೀವಸರ್ವಶಃ।**
**ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**

(ಅಧ್ಯಾಯ ೨, ಶ್ಲೋಕ ೫೮)

"ಆಮೆಯು ತನ್ನ ಅಂಗಗಳನ್ನು ಚಿಪ್ಪಿನೊಳಗೆ ಸೆಳೆದುಕೊಳ್ಳುವಂತೆ ಯಾರು ತನ್ನ ಇಂದ್ರಿಯಗಳನ್ನು ಇಂದ್ರಿಯ ವಿಷಯಗಳಿಂದ ಹಿಂದಕ್ಕೆ ಎಳೆದುಕೊಳ್ಳಬಲ್ಲರೋ ಅವರು ಪರಿಪೂರ್ಣ ಪ್ರಜ್ಞೆಯಲ್ಲಿ ಸ್ಥಿತರಾಗಿರುತ್ತಾರೆ."

**೧೦. ಯೋಗಿಯ ರಾತ್ರಿ ಹಗಲುಗಳು:** ಯೋಗಿಯು ಐಹಿಕ ವ್ಯವಹಾರಗಳಿಂದ ದೂರ ಉಳಿದು ಆತ್ಮೋನ್ಮುಖ ಸಾಧನೆಯಲ್ಲಿ ತತ್ಪರನಾಗಿರುತ್ತಾನೆ. ಇದನ್ನು ಜೈನಾಚಾರ್ಯರಾದ ಕುಂದಕುಂದಾಚಾರ್ಯರು ತಮ್ಮ 'ಮೋಕ್ಷಪಾಹುಡ'ದಲ್ಲಿ ಈ ರೀತಿ ಹೇಳಿದ್ದಾರೆ: "ಯಾವ ಯೋಗಿಯು ಬಾಹ್ಯವ್ಯವಹಾರಗಳಲ್ಲಿ ನಿದ್ರಿಸುತ್ತಾನೆಯೋ, ಆತನು ತನ್ನ ನಿಜಸ್ವರೂಪ ಸಾಧನೆಯ ಕಾರ್ಯದಲ್ಲಿ ಜಾಗೃತನಾಗಿರುತ್ತಾನೆ ಮತ್ತು ಯಾರು ಐಹಿಕ ವ್ಯವಹಾರದಲ್ಲಿಯೇ ವ್ಯಸ್ತರಾಗಿರುತ್ತಾರೋ, ಅವರು ಆತ್ಮಸಾಧನೆಯಲ್ಲಿ ನಿದ್ರಿಸುತ್ತಾರೆ" (ಮೋಕ್ಷಪಾಹುಡ, ಗಾಥೆ ೩೧).

ಇದನ್ನೇ ಆಚಾರ್ಯ ಯೋಗೀಂದುದೇವ ವಿರಚಿತ 'ಪರಮಾತ್ಮಪ್ರಕಾಶ'ದಲ್ಲಿ ಹೀಗೆ ಹೇಳಿದೆ: "ಸಮಸ್ತ ಅಜ್ಞಾನಿ ಸಂಸಾರಿ ಜೀವಿಗಳಿಗೆ ಯಾವುದು ರಾತ್ರಿಯೋ, ಆ ರಾತ್ರಿಯಲ್ಲಿ ಯೋಗಿಗಳು ಜಾಗೃತರಾಗಿರುತ್ತಾರೆ ಮತ್ತು ಯಾವುದರಲ್ಲಿ ಸಂಪೂರ್ಣ ಜಗತ್ತು ಜಾಗೃತವಿರುತ್ತದೆಯೋ, ಅವನ್ನು ರಾತ್ರಿಯೆಂದು ಮನ್ನಿಸಿ ಯೋಗಿಗಳು ಯೋಗನಿದ್ರೆಯಲ್ಲಿ ನಿದ್ರಿಸುತ್ತಾರೆ" (ಪರಮಾತ್ಮಪ್ರಕಾಶ, ಅಧಿಕಾರ ೨, ಗಾಥೆ ೪೬೧). ವೈದಿಕಶಾಸ್ತ್ರವಾದ ಭಗವದ್ಗೀತೆಯು ಈ ವಿಷಯದಲ್ಲಿ ಸಾಮರಸ್ಯವನ್ನು ವ್ಯಕ್ತಪಡಿಸುತ್ತಾ ಈ ರೀತಿ ಹೇಳುತ್ತದೆ:

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**

(ಅಧ್ಯಾಯ ೨, ಶ್ಲೋಕ ೬೯)

"ಎಲ್ಲ ಜೀವಿಗಳಿಗೆ ಯಾವುದು ರಾತ್ರಿಯೋ ಅದು ಜಿತೇಂದ್ರಿಯನಿಗೆ ಎಚ್ಚರವಾಗಿರುವ ಕಾಲ. ಎಲ್ಲಾ ಪ್ರಾಣಿಗಳು ಎಚ್ಚೆತ್ತಿರುವ ಕಾಲ ಯಾವುದೋ, ಅದು ತನ್ನ ಆಂತರಿಕ ಪರೀಕ್ಷೆಯನ್ನು ಮಾಡಿಕೊಳ್ಳುವ ಮುನಿಗೆ ರಾತ್ರಿಯಾಗಿರುತ್ತದೆ."

**೧೧. ದೀಪದ ನಿದರ್ಶನ:** ಯೋಗದ ಅಂತರಂಗ ಸಾಧನೆಯಾಗಿರುವ ಧಾರಣೆ ಧ್ಯಾನ ಸಮಾಧಿಗಳಲ್ಲಿ ತತ್ಪರನಾದ ಯೋಗಿಯು ಏಕಾಗ್ರಚಿತ್ತನಾಗಿರುತ್ತಾನೆ. ಜೈನಾಚಾರ್ಯ ಕುಂದಕುಂದರು ತಮ್ಮ 'ಭಾವಪಾಹುಡ' ಕೃತಿಯಲ್ಲಿ ಇದನ್ನು ಗಾಳಿಯಾಡದ ಕೋಣೆಯಲ್ಲಿ ಉರಿಯುವ ದೀಪವೆಂಬ ಸುಂದರವಾದ ಉಪಮೆಯೊಂದಿಗೆ ವಿವರಿಸಿದ್ದಾರೆ:

"ಯಾವ ಪ್ರಕಾರ ದೀವಿಗೆಯು ವಾಯುಸಂಚಾರವಿಲ್ಲದ ಗರ್ಭಗೃಹದಲ್ಲಿ ನಿಶ್ಚಲವಾಗಿ ಉರಿಯುತ್ತದೋ, ಅದೇ ಪ್ರಕಾರ ಮನಸ್ಸಿನಲ್ಲಿ ರಾಗರೂಪದ ಗಾಳಿಯಿಂದ ರಹಿತವಾದ ಧ್ಯಾನರೂಪದ ದೀವಿಗೆ ಕೂಡ ಏಕಾಗ್ರವಾಗಿ ನಿಂತುಕೊಳ್ಳುತ್ತದೆ; ದೇದೀಪ್ಯಮಾನವಾಗಿ ಉರಿಯುತ್ತಾ ಆತ್ಮಸ್ವರೂಪವನ್ನು ಪ್ರಕಾಶಿಸುತ್ತದೆ" (ಭಾವಪಾಹುಡ, ಗಾಥೆ–೧೨೩).

ಭಗವದ್ಗೀತೆಯಲ್ಲಿಯೂ ಈ ಭಾವನೆ ಸುಂದರವಾಗಿ ಹೀಗೆ ಬಂದಿದೆ:

**ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।**
**ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥**

(ಅಧ್ಯಾಯ ೬, ಶ್ಲೋಕ ೧೯)

"ಗಾಳಿ ಬೀಸದ ಸ್ಥಳದಲ್ಲಿ ದೀಪವು ಹೇಗೆ ನಿಶ್ಚಲವಾಗಿರುವುದೋ, ಹಾಗೆಯೇ ಮನಸ್ಸನ್ನು ನಿಯಂತ್ರಿಸುವ ಯೋಗಿಯು ಪರಮಾತ್ಮನ ಧ್ಯಾನದಲ್ಲಿ ನಿಶ್ಚಲನಾಗಿರುತ್ತಾನೆ."

ಈ ರೀತಿ ಭಾರತೀಯ ಸಂಸ್ಕೃತಿಯ ಎಲ್ಲಾ ಧರ್ಮಗಳಲ್ಲೂ ಅನೇಕ ರೀತಿಯ ಸಾಮ್ಯತೆಗಳನ್ನು ಕಾಣಬಹುದು. ಆದುದರಿಂದ ಭಾರತೀಯರಾದ ನಾವೆಲ್ಲರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತಾ, ಒಗ್ಗಟ್ಟಿನಿಂದ, ಪರಸ್ಪರ ಶಾಂತಿ, ಸಹನೆ ಮತ್ತು ಸಹಕಾರದ ಬಾಳ್ವೆಯನ್ನು ನಡೆಸುವ ಸಂಕಲ್ಪ ಮಾಡೋಣ.

### ತಿದ್ದುಪಡಿ

ವಿವೇಕಪ್ರಭದ ಮಾರ್ಚ್ ೨೦೧೨ರ ಸಂಚಿಕೆಯ ಪುಟ ೨೫ ರಲ್ಲಿ ೧೮೬೭ ರ ಬದಲು ೧೯೯೭ ಎಂದೂ, ಪುಟ ೨೬ರಲ್ಲಿ ೧೮೮೬ ಆಗಸ್ಟ್ ೧೬ರ ಬದಲು ೧೮೯೯, ಆಗಸ್ಟ್ ೧೯ ಎಂದೂ ಮುದ್ರಿತವಾಗಿದೆ. ಈ ಮುದ್ರಣದೋಷಗಳಿಗಾಗಿ ವಿಷಾದಿಸುತ್ತೇವೆ. ಇವನ್ನು ಸರಿಪಡಿಸಿಕೊಂಡು ಓದಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. –ಸಂ.